- ಎಕರೆಗೆ 16–18 ಕೆ.ಜಿ. ಸಾರಜನಕವನ್ನು ಒದಗಿಸುತ್ತದೆ ಹಾಗೂ ಬೆಳೆಗಳಿಗೆ ಬೇಕಾದ ಲಘು ಪೋಷಕಾಂಶಗಳು ದೊರೆಯುತ್ತವೆ. ಅಜೋಲವನ್ನು ಕಾಂಪೋಸ್ಟ್ ತಯಾರಿಕೆಯಲ್ಲಿ ಮಿಶ್ರಣಮಾಡಿ ಪೌಷ್ಟಿಭರಿತ ಸಾವಯವ ಗೊಬ್ಬರವನ್ನು ಉತ್ಪಾದಿಸಬಹುದು.

**ಸಸಿ ಬೇರುಗಳ ಉಪಚಾರ:**

1) 6 ಅಡಿ ಉದ್ದ ಹಾಗೂ 6 ಅಡಿ ಅಗಲದ ಹೊಂಡವನ್ನು ಮಾಡಿ ಅದರಲ್ಲಿ 4 ಅಂಗುಲ ನೀರು ನಿಲ್ಲಿಸಬೇಕು.

2) 400 ಗ್ರಾಂ. ಅಝೋಸ್ಪೈರಿಲಂ ಗೊಬ್ಬರವನ್ನು ಹೊಂಡದಲ್ಲಿ ಹಾಕಿ ಮಿಶ್ರಣ ಮಾಡಬೇಕು. ಸಸಿಮಡಿಯಿಂದ ಕಿತ್ತ ಸಸಿಗಳನ್ನು 10 ರಿಂದ 15 ನಿಮಿಷಗಳ ಕಾಲ ಮಿಶ್ರಣದಲ್ಲಿ ಅದ್ದಿ ನಂತರ ನಾಟಿ ಮಾಡುವುದು.

**ಭತ್ತದ ಗದ್ದೆಯಲ್ಲಿ ಜೈವಿಕ ಗೊಬ್ಬರಗಳ ಬಳಕೆ:**

❖ ನೀಲಿ ಹಸಿರು ಪಾಚಿ: ಭತ್ತದ ಸಸಿ ನಾಟಿ ಮಾಡಿದ ಒಂದು ವಾರದ ನಂತರ ಪ್ರತಿ ಎಕರೆಗೆ 4 ಕೆ.ಜಿ. ರಂತೆ ಪೂರೈಸಬೇಕು. ಈ ನೀಲಿ ಹಸಿರು ಪಾಚಿಯ ಬಳಕೆಯಿಂದ ಭತ್ತದ ಬೆಳೆಯಲ್ಲಿ ಸುಮಾರು 10–12 ಕೆ.ಜಿ. ಸಾರಜನಕವನ್ನು ಸ್ಥಿರೀಕರಿಸಿ, ಶೇ.25 ರಷ್ಟು ಶಿಫಾರಸ್ಸು ಮಾಡಿದ ಸಾರಜನಕವನ್ನು ಉಳಿತಾಯ ಮಾಡಬಹುದು. ಈ ಜೀವಿಗಳು ಸಸ್ಯಗಳ ಬೆಳವಣಿಗೆಯ ಪ್ರಚೋದನಾಕಾರಿ ವಸ್ತುಗಳನ್ನು ಉತ್ಪಾದಿಸುವುದರಿಂದ ಶೇ. 10–15 ರಷ್ಟು ಹೆಚ್ಚಿನ ಇಳುವರಿಯನ್ನು ಪಡೆಯಬಹುದು.

❖ ಬ್ಯಾಸಿಲಸ್ ಮೆಗಟೇರಿಯಂ, ರಂಜಕ ಕರಗಿಸುವ ಜೀವಾಣು ಗೊಬ್ಬರವನ್ನು ಒಂದು ಎಕರೆಗೆ 800 ಗ್ರಾಂ. ರಂತೆ ಚೆನ್ನಾಗಿ ಒಣಗಿಸಿ ಜರಡಿ ಮಾಡಿದ 4 ಕಿ.ಗ್ರಾಂ. ಕೊಟ್ಟಿಗೆ ಗೊಬ್ಬರ ಹಾಗೂ 4 ಕಿ.ಗ್ರಾಂ. ಮಣ್ಣಿನೊಡನೆ ಬೆರೆಸಿ, ಭತ್ತ ನಾಟಿ ಮಾಡಿದ 6–8 ದಿನಗಳಲ್ಲಿ ಗದ್ದೆಯಲ್ಲಿರುವ ನೀರನ್ನು ಬಸಿದು ಸಮವಾಗಿ ಎರಚುವುದು.

**ಜೀವಾಮೃತದ ಬಳಕೆ:**

ಜೀವಾಮೃತವನ್ನು ತಯಾರಿಸಲು 200 ಲೀ. ನೀರು, 10 ಕೆ.ಜಿ. ದೇಶಿ ಹಸುವಿನ ಸಗಣಿ 10 ಲೀ. ದೇಶಿ ಹಸುವಿನ ಗಂಜಲ, 2 ಕೆ.ಜಿ. ದೇಶಿ ಬೆಲ್ಲ, 2 ಕೆ.ಜಿ. ದ್ವಿದಳ ಧಾನ್ಯದ ಹಿಟ್ಟು, ಒಂದು ಹಿಡಿ ಬದುವಿನ ಮಣ್ಣು ಅಥವಾ ಕಾಡಿನ ಮಣ್ಣು ಬೇಕಾಗುತ್ತದೆ.

➢ 200 ಲೀ. ಸಾಮರ್ಥ್ಯದ ಡ್ರಮ್/ಸಿಮೆಂಟ್ ತೊಟ್ಟಿಯಲ್ಲಿ 175 ಲೀ ನೀರು ತೆಗೆದುಕೊಂಡು ಅದಕ್ಕೆ ಮೊದಲನೇಯದಾಗಿ 10 ಕೆಜಿ ಸಗಣಿ ನಂತರದಲ್ಲಿ 2 ಕೆಜಿ ಬೆಲ್ಲ, 2 ಕೆಜಿ ದ್ವಿದಳ ಧಾನ್ಯದ ಹಿಟ್ಟು, 10 ಲೀ ಗಂಜಲ ಮತ್ತು ಒಂದು ಹಿಡಿ ಬದುವಿನ ಮಣ್ಣನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಬೇಕು.

➢ ಜೀವಾಮೃತವಿರುವ ಡ್ರಮ್/ಸಿಮೆಂಟ್ ತೊಟ್ಟಿಯನ್ನು ಒಂದು ತೆಳುವಾದ ತೇವದ ಬಟ್ಟೆ/ ಗೋಣಿಚೀಲದಿಂದ ಮುಚ್ಚಿ ನೆರಳಿನಲ್ಲಿಡಬೇಕು.

➢ ಜೀವಾಮೃತವನ್ನು ಒಂದು ವಾರದವರೆಗು ಪ್ರತಿದಿನ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ (ದಿನಕ್ಕೆ ಮೂರು ಬಾರಿ) ಕೋಲಿನಿಂದ ವೃತ್ತಾಕಾರದಲ್ಲಿ ಒಂದೇ ದಿಕ್ಕಿನಲ್ಲಿ ತಿರುಗಿಸಬೇಕು. ವಿರುದ್ಧ ದಿಕ್ಕಿನಲ್ಲಿ ತಿರುಗಿಸಿದ್ದಲ್ಲಿ ಜೀವಾಮೃತದಲ್ಲಿರುವ ಸೂಕ್ಷ್ಮ ಜೀವಾಣುಗಳು ಸಾಯುತ್ತವೆ.

➢ ಒಚಿದು ವಾರದ ನಂತರ ಜೀವಾಮೃತವು ಬಳಸಲು ಸಿದ್ಧವಾಗುತ್ತದೆ. ಸಿದ್ಧಪಡಿಸಿದ ಜೀವಾಮೃತವನ್ನು ಒಂಬತ್ತರಿಂದ ಹನ್ನೆರಡು ದಿವಸಗಳೊಳಗೆ ಬಳಸಬೇಕು.

➢ ಬೆಳೆಗೆ ನೀರು ಹಾಯಿಸುವಾಗ ಕಾಲುವೆ ಮೂಲಕವೇ ಜೀವಾಮೃತವನ್ನು ನೀಡಬಹುದು.

**ರೋಗ ಮತ್ತು ಕೀಟ ನಿರ್ವಹಣೆ:**

➢ ಮೊದಲಿಗೆ ಆಳವಾದ ಮಾಗಿ ಉಳುಮೆ ಮಾಡಬೇಕು. ಹೀಗೆ ಮಾಡುವುದರಿಂದ ಮಣ್ಣಿನಲ್ಲಿರುವ ರೋಗಾಣುಗಳು ಮತ್ತು ಕೀಟಗಳು ಹೆಚ್ಚಿನ ಉಷ್ಣಾಂಶಕ್ಕೆ ನಾಶವಾಗುತ್ತವೆ.

➢ ಬಿತ್ತನೆಗೆ ರೋಗ ರಹಿತ ಬೀಜವನ್ನು ಉಪಯೋಗಿಸುವುದು ಮತ್ತು ಸೂಚಿಸಿದ ಸಮಯಕ್ಕೆ ಸರಿಯಾಗಿ ಬಿತ್ತನೆ ಮತ್ತು ನಾಟಿ ಮಾಡುವುದು

➢ ಸ್ವಚ್ಛ ಬೇಸಾಯ ಪದ್ಧತಿ – ಬದುಗಳಲ್ಲಿ ಹಾಗೂ ಹೊಲದಲ್ಲಿ ಕಂಡು ಬರುವ ಕಳೆಗಳನ್ನು ನಿಯಂತ್ರಣ ಮಾಡುವುದು.

➢ ನಾಟಿ ಮಾಡುವಾಗ ತುದಿ ಚಿವುಟುವುದರಿಂದ ಎಲೆಯ ಹಿಂಭಾದಲ್ಲಿರುವ ಕಾಂಡ ಕೊರೆಯುವ ಹುಳು ಮೊಟ್ಟೆಗಳನ್ನು ನಾಶಪಡಿಸಬಹುದು.

➢ ಸಂಜೆ ವೇಳೆ (6 ರಿಂದ 8 ಗಂಟೆಯವೆರೆಗೆ) ದೀಪದ ಬಲೆಯನ್ನು ಇಟ್ಟು ಕೀಟಗಳನ್ನು ಆಕರ್ಷಿಷಿಸಿ ನಾಶಪಡಿಸಬೇಕು.

➢ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಬೆಳೆ ಪರಿವರ್ತನೆ ಮಾಡಬೇಕು. ಅಂದರೆ ಒಂದೇ ಪ್ರದೇಶದಲ್ಲಿ ಪ್ರತಿ ಬಾರಿಯೂ ಭತ್ತವನ್ನೇ ಬೆಳೆಯಬಾರದು. (ದ್ವಿದಳ ಧಾನ್ಯ ಇತ್ಯಾದಿ ಬೆಳೆಯಬೇಕು)

➢ ಬೇವಿನ ಎಣ್ಣೆಯನ್ನು (ನೀಮ್ ಆಯಿಲ್) ಪ್ರತಿ ಲೀಟರ್ ನೀರಿಗೆ 4 ಮಿ.ಲೀಟರ್‌ನಂತೆ ಬೆರೆಸೆ ಸಿಂಪಡಿಸಬೇಕು.

ಈ ಮೇಲೆ ತಿಳಿಸಿದ ಎಲ್ಲಾ ವಿಧಾನಗಳನ್ನು ಅನುಸರಿಸುವುದರಿಂದ ಎಕರೆವಾರು ಇಳುವರಿಯನ್ನು ಹೆಚ್ಚಿಸುವುದರ ಜೊತೆಗೆ ಬೆಳೆ ನಷ್ಟವನ್ನು ತಪಿಸಿ ಹೆಚ್ಚಿನ ಇಳವರಿಯನ್ನು ಪಡೆಯಬಹುದು.

◆

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು

**ಕೃಷಿ ವಿಜ್ಞಾನ ಕೇಂದ್ರ**

ಕಂದಲಿ, ಹಾಸನ – 573 217. ದೂರವಾಣಿ : 08172–256092

ಮಿಂಚಂಚೆ : hassan.kvk@gmail.com ಜಾಲತಾಣ : www.kvkhassan.com

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ವಿಜ್ಞಾನ ಕೇಂದ್ರ, ಕಂದಲಿ, ಹಾಸನ

# ಭತ್ತದಲ್ಲಿ ಸಾವಯವ ಕೃಷಿ

ಕು. ಬಿಂದು ಎನ್

ಡಾ. ರಾಜೇಗೌಡ

ಡಾ. ಗಿರೀಶ್ ಎ. ಸಿ

ಕು. ಲಾವಣ್ಯ ಕೆ. ಎಸ್



2020–21

ಸಾವಯವ ಕೃಷಿ ಇತ್ತೀಚೆಗೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಾಮುಖ್ಯತೆ ಪಡೆಯುತ್ತಿದ್ದು ರೈತರು ಹೆಚ್ಚು ಆಸಕ್ತಿವಹಿಸಿ ಕೃಷಿ ಕೈಗೊಳ್ಳುತ್ತಿರುವುದು ಒಂದಡೆಯಾದರೆ, ಇನ್ನೊಂದಡೆ ಸ್ಥಳೀಯ ತಳಿಗಳಿಗೆ ಮತ್ತು ಆರೋಗ್ಯಪೂರ್ಣ ಆಹಾರದ ಕಡೆಗೆ ಬಳಕೆದಾರರು ಒಲವು ತೋರುತ್ತಿದ್ದಾರೆ. ಸಾವಯವ ಕೃಷಿಯ ಮೂಲಕ ಮಣ್ಣು ಮತ್ತು ನೀರು ಸಂರಕ್ಷಣೆ, ಸಾವಯವ ಅಂಶ ವೃದ್ಧಿ ಹಾಗೂ ಮಣ್ಣಿನ ಫಲವತ್ತತೆ ನಿರ್ವಹಣೆ, ಸ್ಥಳೀಯ ತಳಿಗಳನ್ನು ಹಾಗೂ ಕೃಷಿ ಪದ್ಧತಿಗಳನ್ನು ಅನುಸರಿಸಿ ಉತ್ಪಾದನೆ ಹೆಚ್ಚಿಸಲು ಹೇರಳ ಅವಕಾಶಗಳಿವೆ. ಸಾವಯವ ಕೃಷಿಯು ಮಲೆನಾಡು ಹಾಗೂ ಅರೆಮಲೆನಾಡು ಪ್ರದೇಶಕ್ಕೆ ಹೆಚ್ಚು ಸೂಕ್ತವೆಂದು ಸಂಶೋಧನೆಯಿಂದ ತಿಳಿದುಬಂದಿದೆ. ಸಾವಯವ ಕೃಷಿಯು ಒಂದು ಸಮಗ್ರ ಕೃಷಿ ಪದ್ಧತಿಯಾಗಿದ್ದು, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಅಭಿವೃದ್ಧಿ ಹಾಗೂ ಸೂಕ್ತ ಬಳಕೆಗೆ ಹೆಚ್ಚು ಒತ್ತು ಕೊಡುತ್ತದೆ. ಅಲ್ಲದೆ ಸಂಶೋಧನೆಯಿಂದ ಸಾವಯವ ಕೃಷಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಮಣ್ಣಿನ ಆರೋಗ್ಯ, ಬೆಳೆ ಉತ್ಪಾದನೆ, ಪೋಷಕಾಂಶಗಳ ನಿರ್ವಹಣೆ, ಉಪಯುಕ್ತ ಸೂಕ್ಷ್ಮಾಣು ಜೀವಿಗಳ ಅಭಿವೃದ್ಧಿ ಹಾಗೂ ಅವುಗಳ ಬಳಕೆ ಮತ್ತು ಕೀಟ ಹಾಗೂ ರೋಗಗಳ ಸಮಗ್ರ ನಿರ್ವಹಣೆ ಪದ್ಧತಿಗಳನ್ನು ಅಳವಡಿಸಿಕೊಂಡು, ಸಾವಯವ ಕೃಷಿಯಲ್ಲಿ ನಿರಂತರವಾಗಿ ಅಧಿಕ ಇಳುವರಿ ಪಡೆಯಬಹುದೆಂದು ತಿಳಿದುಬಂದಿದೆ.

ಸಾವಯವ ಕೃಷಿ ಕ್ಷೇತ್ರ ಮಟ್ಟದಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲ ಹಾಗೂ ಪರಿಕರಗಳ ಬಳಕೆ ಮಾಡುವುದರಿಂದ ಬಾಹ್ಯ ಪರಿಕರಗಳ ಮೇಲಾಗುವ ಖರ್ಚು ಕಡಿಮೆ ಮಾಡಿ, ಕೃಷಿಯನ್ನು ಲಾಭ'ದಾಂಯುಕಗೊಳಿಸುತ್ತದೆ. ಕೃಷಿಂಯು ಆರ್ಥಿಕವಾಗಿ ಲಾಭದಾಯಕವಾಗಿದೆಯಲ್ಲದೆ ಪರಿಸರ ಸಂರಕ್ಷಣೆಗೆ ಪೂರಕವಾಗಿದೆ. ಅತಿಯಾದ ರಾಸಯನಿಕ ಗೊಬ್ಬರ, ಪೀಡೆನಾಶಕಗಳ ಬಳಕೆಯಿಂದ ನಮ್ಮ ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು ಹಾಗೂ ಜೀವ ವೈವಿಧ್ಯತೆಗೆ ಹಾನಿಯುಂಟಾಗಿ ಅವುಗಳು ಕ್ಷೀಣಿಸುತ್ತಿವೆ. ಕೀಟನಾಶಕ ಹಾಗೂ ಇತರ ಪೀಡೆನಾಶಕಗಳ ಬಳಕೆಯಿಂದ ಆಹಾರದ ಗುಣಮಟ್ಟ ಹಾಳಾಗುತ್ತಿದೆ ಹಾಗೂ ವಾತಾವರಣ ಕಲುಷಿತಗೊಳ್ಳುತ್ತಿದೆ ಮತ್ತು ಬೇಸಾಯದ ಖರ್ಚು ಕೂಡ ದಿನೇ ದಿನೇ ಹೆಚ್ಚಾಗುತ್ತಿದೆ. ಪರಿಸರ ಹಾಗೂ ಮಣ್ಣಿನ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿರುವುದರಿಂದ ಸಾವಯವ ಪದ್ಧತಿಯನ್ನು ಅಳವಡಿಸಿಕೊಂಡು ಪರಿಸರ ಹಾಗೂ ಮಣ್ಣಿನ್ನು ರಕ್ಷಿಸಿ ನಮ್ಮೆಲ್ಲರ ಆರೋಗ್ಯವನ್ನೂ ಕೂಡ ವೃದ್ಧಿಸಿಕೊಳ್ಳೋಣ.

**ಸಾವಯವ ವಸ್ತುಗಳ ಮಹತ್ವ/ ಉಪಯುಕ್ತತೆ:**

- ಸಾವಯವ ವಸ್ತುಗಳು ಕಣಗಳ ಜೋಡಣೆಯನ್ನು ಪ್ರೋತ್ಸಾಹಿಸಿ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.
- ಮಣ್ಣಿನ ಸಾಂದ್ರತೆ ಕಡಿಮೆ ಮಾಡುವುದರ ಜೊತೆಗೆ ಗಾಳಿ ಮತ್ತು ನೀರಿನ ಮುಕ್ತ ಚಲನೆಗೆ ಅವಕಾಶ ಮಾಡುತ್ತದೆ.
- ಬೆಳೆಗಳಿಗೆ ಬೇಕಾದ ಎಲ್ಲಾ ತರಹದ ಸೂಕ್ಷ್ಮ ಪೋಷಕಾಂಶಗಳು ಸಿಗುವಂತೆ ಮಾಡುತ್ತವೆ.
- ಮಳೆಯ ನೀರು ಬಿದ್ದಲ್ಲಿಯೇ ಇಂಗಲು ಸಹಾಯ ಮಾಡುತ್ತದೆ.
- ಜಲ ಸಾಮರ್ಥ್ಯವನ್ನು ಹೆಚ್ಚಿಸಿ ಮಳೆ–ಗಾಳಿಯಿಂದ ಆಗುವ ಮಣ್ಣಿನ ಕೊಚ್ಚುವಿಕೆ/ ಸವಳಿಕೆಯನ್ನು ಕಡಿಮೆ ಮಾಡುತ್ತದೆ.
- ಕೆಂಪು ಮಣ್ಣಿನಲ್ಲಿ ಆಗುವ ಮಣ್ಣು ಗಟ್ಟಿಯಾಗುವಿಕೆಯನ್ನು ತಡೆಗಟ್ಟುವಲ್ಲಿ ಸಾವಯವ ವಸ್ತುವು ಸಹಕರಿಸುತ್ತದೆ.
- ಸಾವಯವ ಗೊಬ್ಬರಗಳು ಮಣ್ಣಿನ ಭೌತಿಕ, ರಾಸಾಯನಿಕ ಹಾಗು ಜೈವಿಕ ಗುಣಗಳನ್ನು ಹೆಚ್ಚಿಸಿ ಮಣ್ಣಿನ ಆರೋಗ್ಯ ಹಾಗೂ ಅದರ ಫಲವತ್ತತೆಯನ್ನು ಹೆಚ್ಚಿಸುತ್ತದೆ.

**ಭತ್ತದಲ್ಲಿ ಸಾವಯವ ಬೇಸಾಯ ಪದ್ಧತಿಗಳು**

ಭತ್ತವು ಕರ್ನಾಟಕ ರಾಜ್ಯದ ಒಂದು ಪ್ರಮುಖ ಆಹಾರ ಬೆಳೆಯಾಗಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಸುಮಾರು 14.0 ಲಕ್ಷ ಹೆ. ಪ್ರದೇಶದಲ್ಲಿ ಬೆಳೆಯುತ್ತಿದ್ದು, ಸ್ಥಳೀಯ ತಳಿಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆದರೆ ಉತ್ತಮ ಹಾಗೂ ಗುಣಮಟ್ಟದ ಇಳುವರಿಯೊಂದಿಗೆ ಆರೋಗ್ಯವು ಕೂಡ ವೃದ್ಧಿಸುತ್ತದೆ.

**ಸಸಿ ಮಡಿ ತಯಾರಿಕೆ:**

ಒಚಿದು ಎಕರೆ ಪ್ರದೇಶಕ್ಕೆ 200 ಚ. ಮೀಟರ್ ಪ್ರದೇಶ ಬೇಕಾಗುತ್ತದೆ. 7.5 ಮಿ ಉದ್ದ, 1.2 ಮೀ ಅಗಲ ಮತ್ತು 10 ಸೆಂ.ಮೀ. ಎತ್ತರವಿರುವ 30 ಸಸಿ ಮಡಿಗಳನ್ನು ಸಿದ್ಧಪಡಿಸಿ, ಪ್ರತಿ ಸಸಿ ಮಡಿಗೂ 25–30 ಕೆ.ಜಿ. ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್, ಎಲುಬಿನ ಪುಡಿ ಗೊಬ್ಬರ ಅಥವಾ ಎರಹುಳು ಗೊಬ್ಬರ ಕೊಡಬೇಕು. ಜೊತೆಗೆ 5 ಕೆ.ಜಿ. ಬೇವಿನ ಹಿಂಡಿಯನ್ನು ಕೊಟ್ಟು ಮಣ್ಣಿನಲ್ಲಿ ಬೆರೆಸಿ, ಬೀಜೋಪಚಾರ ಮಾಡಿದ ಬಿತ್ತನೆ ಬೀಜವನ್ನು 30 ಸಸಿ ಮಡಿಗಳಿಗೂ ಸಮಾನವಾಗಿ ಹಂಚಿ ಬಿತ್ತಬೇಕು.

**ಜೈವಿಕ ಗೊಬ್ಬರಗಳಿಂದ ಬೀಜೋಪಚಾರ:**

50 ಗ್ರಾಂ ಬೆಲ್ಲ ಅಥವಾ ಸಕ್ಕರೆಯನ್ನು ಅರ್ಧ ಲೀಟರ್ ನೀರಿನಲ್ಲಿ ಕರಗಿಸಿ 5 ನಿಮಿಷಗಳ ಕಾಲ ಕುದಿಸಿ ಅಂಟು ದ್ರಾವಣವನ್ನು ತಯಾರಿಸಿಕೊಳ್ಳಬೇಕು. ತಂಪಾದ ಬೆಲ್ಲ ಅಥವಾ ಸಕ್ಕರೆ ದ್ರಾವಣಕ್ಕೆ 400 ಗ್ರಾಂ ಅಝೋಸ್ಪೈರಿಲಂ ಹಾಕಿ ಮಿಶ್ರಣ ಮಾಡಿ ನಂತರ ಅರ್ಧ ಗಂಟೆ ನೆರಳಿನಲ್ಲಿ ಒಣಗಿಸಿ ಬಿತ್ತಲು ಉಪಯೋಗಿಸಬೇಕು.

**ನಾಟಿ ಗದ್ದೆಯ ಸಿದ್ಧತೆ:**

- ➢ ಆಳವಾದ ಮಾಗಿ ಉಳಮೆ/ಮುಂದಾಗಿ ಉಳುಮೆ ಮಾಡುವುದು.
- ➢ ಅರೆ ಮಲೆನಾಡು ಪ್ರದೇಶಗಳಲ್ಲಿ ನಾಟಿ ಮಾಡುವ ಎರಡು ವಾರಗಳ ಮೊದಲು ವರ್ಷಕ್ಕೊಮ್ಮೆ ಪ್ರತಿ ಎಕರೆಗೆ 800 ಕಿ.ಗ್ರಾಂ.ಗಳಷ್ಟು ಕಪ್ಪಾಗಿರುವ ಭತ್ತದ ಹೊಟ್ಟಿನ ಬೂದಿಯನ್ನು ಒದಗಿಸುವುದು.
- ➢ ಹಸಿರು ಗೊಬ್ಬರದ ಸಸ್ಯಗಳಾದ ಡಯಂಚ, ಸನ್‌ಹೆಂಪ್, ಅಲಸಂದೆ, ಕುದುರೆ ಮಸಾಲೆ ಇತ್ಯಾದಿಗಳನ್ನು ಬೆಳೆದು, ಸುಮಾರು 5–7 ವಾರಗಳ ನಂತರ ಹೂ ಬಿಡುವುದಕ್ಕೆ ಮುಂಚಿತವಾಗಿ ಅದೇ ಸ್ಥಳದಲ್ಲಿ ಮಣ್ಣಿಗೆ ಸೇರಿಸುವುದರಿಂದ ಸುಮಾರು 2 ಟನ್ ಸಾವಯವ ಗೊಬ್ಬರವನ್ನು ಒದಗಿಸಿದಂತಾಗುತ್ತದೆ ಮತ್ತು 50 ದಿನಗಳಲ್ಲಿ ಒಂದು ಎಕರೆಗೆ 40 ಕೆ.ಜಿ. ಸಾರಜನಕವನ್ನು ಸ್ಥಿರೀಕರಿಸುತ್ತದೆ.
- ➢ ಹಸಿರಲೆ ಗೊಬ್ಬರಗಳಾದ ಸುಬಾಬುಲ್, ಗ್ಲಿರಿಸೀಡಿಯಾ, ಹೊಂಗೆ, ಬೇವು, ಇತ್ಯಾದಿ ಸಸ್ಯಗಳ ಎಲೆಗಳು ಮತ್ತು ಸಣ್ಣ ಸಣ್ಣ ಕೊಂಬೆಗಳನ್ನು ಕತ್ತರಿಸಿ ಎಕರೆಗೆ 2 ಟನ್‌ನಷ್ಟು ನಾಟಿಯ ಎರಡು ವಾರಗಳ ಮೊದಲು ಭೂಮಿಗೆ ಸೇರಿಸುವುದು. ಹಸಿರಲೆ ಗೊಬ್ಬರಗಳ ಗಿಡಗಳನ್ನು ಬದುಗಳಲ್ಲಿ ಬೆಳಸಬಹುದು ಇದರಿಂದ ಬದುಗಳಲ್ಲಿ ಕಳೆಗಳೂ ಕೂಡ ಕಡಿಮೆಯಾಗುತ್ತದೆ.



ಚಂಬೆ ಸನ್‌ಹೆಂಪ್ ಗ್ಲಿರಿಸೀಡಿಯಾ ಸುಬಾಬುಲ್

ಸಾಮಾನ್ಯವಾಗಿ ಎಲ್ಲಾ ಹಸಿರು ಗೊಬ್ಬರ ಸಸ್ಯಗಳು ವಾತಾವರಣದಲ್ಲಿರುವ ಸಾರಜನಕವನ್ನು ಮಣ್ಣಿನಲ್ಲಿರುವ ಸೂಕ್ಷ್ಮಜೀವಾಣುಗಳ ಸಹಾಯದಿಂದ ಸಂಗ್ರಹಿಸಿ ಬೇರುಗಳಲ್ಲಿ ಸೇರಿಸುತ್ತವೆ.

- ➢ 800 ಗ್ರಾಂ. ಅಝೋಸ್ಪೈರಿಲಂ ಜೈವಿಕ ಗೊಬ್ಬರವನ್ನು ನುಣ್ಣನೆ ಪುಡಿ ಮಾಡಿದ 10 ಕಿ.ಗ್ರಾಂ ಕೊಟ್ಟಿಗೆ ಗೊಬ್ಬರ ಮತ್ತು 10 ಕಿ.ಗ್ರಾಂ ಮಣ್ಣಿನೊಡನೆ ಮಿಶ್ರಣಗೊಳಿಸುವುದು. ಈ ಮಿಶ್ರಣ ಗೊಬ್ಬರವನ್ನು ಸಸಿ ಕ್ಷೇತ್ರಕ್ಕೆ ಅಥವಾ ಒಂದು ಎಕರೆ ನಾಟಿ ಮಾಡುವ ಪ್ರದೇಶಕ್ಕೆ ನೇರವಾಗಿ ಎರಚಿ ಉಳುಮೆ ಮಾಡುವುದು.
- ➢ ನಾಟಿ ಮಾಡುವುದಕ್ಕಿಂತ 3 ವಾರಗಳ ಮೊದಲೇ 2 ಟನ್ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್‌ನ್ನು ಮಣ್ಣಿನಲ್ಲಿ ಬೆರೆಸುವುದು. ಗೊಬ್ಬರಗಳನ್ನು ಕೊಟ್ಟ ಮೇಲೆ ನೀರು ಒಂದು ಮಡಿಯಿಂದ ಮತ್ತೊಂದು ಮಡಿಗೆ ಹರಿದು ಹೋಗದಂತೆ ಎಚ್ಚರವಹಿಸುವುದು.

**ನಾಟಿ ಗದ್ದೆಯಲ್ಲಿ ಅಜೋಲವನ್ನು ಬೆಳೆಸುವ ಕ್ರಮ:**



ನಾಟಿ ಮಾಡಲು ಸುಮಾರು 120 ದಿವಸಗಳಿಗೆ ಮೊದಲು ಹೆಕ್ಟೇರ್‌ಗೆ 5,000 ದಿಂದ 6,250 ಕಿ.ಗ್ರಾಂ ದನದ ಸಗಣಿ ಹಾಕಿ 5–7.5 ಸೆಂ.ಮೀ. ನೀರು ನಿಲ್ಲಿಸಿ 750 ಕಿ. ಗ್ರಾಂ ಅಜೋಲವನ್ನು ಹರಡುವುದು. ಸುಮಾರು 20 ದಿವಸಗಳಲ್ಲಿ ಇದು 10,000 ರಿಂದ 12,500 ಕಿ. ಗ್ರಾಂ ಗಳಷ್ಟಾಗುತ್ತದೆ.

- · ನಾಟಿಗೆ ಮೊದಲು ನೀರನ್ನೆಲ್ಲಾ ಬಸಿದು ತೆಗೆದು, ಅಜೋಲವನ್ನು ಮಣ್ಣಿನಲ್ಲಿ ಸೇರಿಸಿ.